ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1666
ಮಾನ್ಯ ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 14-03-2022
ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ, ಹಾಗೂ ಪರಿಸರ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸರ್ಕಾರ ಗುರುತಿಸಿರುವ ಪ್ರವಾಸೋದ್ಯಮ ತಾಣಗಳು ಯಾವುವು;	ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯು ಗುರುತಿಸಿರುವ ಪ್ರವಾಸಿ ತಾಣಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಆ)	ಈ ಪ್ರವಾಸೋದ್ಯಮ ತಾಣಗಳಲ್ಲಿ ಪ್ರವಾಸಿಗರಿಗೆ ಇಲಾಖೆಯ ವತಿಯಿಂದ ಒದಗಿಸಲಾಗಿರುವ ಸೌಲಭ್ಯಗಳೇನು;	ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳಲ್ಲಿ ಹಾಗೂ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಪ್ರವಾಸಿ ಸೌಲಭ್ಯಗಳಾದ ಯಾತ್ರಿನಿವಾಸ, ಡಾರ್ಮಿಟರಿ, ಶುದ್ಧ ಕುಡಿಯುವ ನೀರಿನ ಸೌಲಭ್ಯ (ಆರ್.ಓ. ಪ್ಲಾಂಟ್), ಶೌಚಾಲಯ ಮತ್ತು ಸ್ನಾನಗೃಹ, ಪಾರ್ಕಿಂಗ್ ಸೌಲಭ್ಯ, ಪ್ರವಾಸಿ ಸೂಚನಾ ಫಲಕಗಳು, ಆಸನಗಳ ವ್ಯವಸ್ಥೆ, ಮೆಟ್ಟಿಲುಗಳ ನಿರ್ಮಾಣ, ರೈಲಿಂಗ್ಸ್, ಪರಗೋಲ, ಪಾತ್ ವೇ ನಿರ್ಮಾಣ ಮತ್ತು ಅಂತಿಮ ಹಂತದ ಕೂಡು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಒದಗಿಸಲಾಗುತ್ತಿದೆ.
ಇ)	ಈ ಪ್ರವಾಸೋದ್ಯಮ ತಾಣಗಳಲ್ಲಿ ಪ್ರವಾಸಿಗರಿಗೆ ಉಂಟಾಗಿರುವ ಕೊರತೆಗಳೇನು; ಅವುಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳಲ್ಲಿ ಹಾಗೂ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಸೌಲಭ್ಯಗಳ ಕೊರತೆಗಳ ಸಂಬಂಧ, ಮಾನ್ಯ ಸಚಿವರು, ಶಾಸಕರು, ಜನ ಪ್ರತಿನಿಧಿಗಳು, ಇಲಾಖಾ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಮತ್ತು ಮುಂತಾದವರಿಂದ ಬರುವ ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಗಳು/ಇಲಾಖಾ ಅಧಿಕಾರಿಗಳಿಂದ ವರದಿ ಪಡೆದು, ಇಲಾಖೆಗೆ ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆಗೆ ಅನುಗುಣವಾಗಿ, ಪರಿಶೀಲಿಸಿ ಪ್ರವಾಸಿ ಸೌಲಭ್ಯಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲು ಕ್ರಮವಹಿಸಲಾಗುತ್ತಿದೆ.

TOR 102 TDV 2022

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ, ಹಾಗೂ ಪರಿಸರ ಸಚಿವರು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ವಿಧಾನ ಪರಿಷತ್ತ್ ಸದಸ್ಯರಾದ ಶ್ರೀ ಅ.ದೇವೇಗೌಡ (ಪದವೀದರರ ಕ್ಷೇತ್ರ) ಅವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1666 ಕ್ಕೆ

ಅನುಬಂಧ-1

ಪ್ರವಾಸೋದ್ಯಮ ಇಲಾಖೆಯಿಂದ ಬೆಂಗಳೂರು ನಗರ. ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳ ವಿವರ

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ಪ್ರವಾಸಿ ತಾಣಗಳು	ಪ್ರವಾಸಿ ತಾಣಗಳ ಸಂಖ್ಯೆ
1	ಬೆಂಗಳೂರು ನಗರ	ಬೆಂಗಳೂರು	ಕಬ್ಬನ್ ಪಾರ್ಕ್, ಲಾಲ್‌ಭಾಗ್, ಟಿಪ್ಪುಫೋರ್ಟ್, ಟಿಪ್ಪು ಅರಮನೆ, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ರೋರಿಚ್ ಎಸ್ಟೇಟ್-ತಾತಗುಣಿ, ವಿಧಾನಸೌಧ, ಸ್ಯಾಂಕಿ ಕೆರೆ, ಹಲಸೂರು ಕೆರೆ, ಸಂಗೀತ ವಸ್ತು ಸಂಗ್ರಹಾಲಯ ಜೆ.ಪಿ.ನಗರ, ರಾಚೇನಹಳ್ಳಿ ಕೆರೆ, ಹೆರಿಟೇಜ್ ಗ್ರಾಮ-ಶ್ರೀರಾಂಪುರ-ಜಕ್ಕೂರು. ನೆಲದಸಿರಿ ತಾವರೆಕೆರೆ, ನೆಹರು ತಾರಾಲಯ. ಬೆಂಗಳೂರು ಸರ್ಕಾರಿ ವಸ್ತ ಸಂಗ್ರಹಾಲಯ.	16
		ಬೆಂಗಳೂರು ಉತ್ತರ	ಹೆಸರಘಟ್ಟ	1
		ಬೆಂಗಳೂರು ದಕ್ಷಿಣ	ರಾಮೋಹಳ್ಳಿ, ದೊಡ್ಡ ಆಲದಮರ	2
		ಆನೇಕಲ್	ಮುತ್ಯಾಲಮಡುವು, ಬನ್ನೇರುಘಟ್ಟ	2
2	ಬೆಂಗಳೂರು ಗ್ರಾಮಾಂತ ರ	ನೆಲಮಂಗಳ	ಶಿವಗಂಗೆ	1
		ದೊಡ್ಡ ಬಳ್ಳಾಪುರ	ಹುಲ್ಲುಕಡ್ಡಿ ಬೆಟ್ಟ, ಮಾಕಳಿದುರ್ಗ ಬೆಟ್ಟ	2
		ದೇವನಹಳ್ಳಿ	ದೇವನಹಳ್ಳಿ. ಟಿಪ್ಪು ಜನ್ಮಸ್ಥಳ ಮತ್ತು ಕೋಟೆ, ಕುಂದಾಣ ಬೆಟ್ಟ	3
		ಹೊಸಕೋಟೆ	ಅಮ್ಮನಿಕೆರೆ (ಹೊಸಕೋಟೆ ಕೆರೆ)	1
3	ರಾಮನಗರ	ರಾಮನಗರ	ರಾಮನಗರ, ಕಣ್ವ, ರೇವಣಸಿದ್ದೇಶ್ವರ ಬೆಟ್ಟ. ಹಂದಿಗುಂದಿ ಬೆಟ್ಟ, ಕುಟಗಲ್ಲು, ತಿಮ್ಮಪ್ಪನ ಬೆಟ್ಟ. ಜಲಸಿದ್ದೇಶ್ವರ ಬೆಟ್ಟ, ಬಾನಂದೂರು	7
		ಮಾಗಡಿ	ಸಾವನದುರ್ಗ. ತಿಪ್ಪಗೊಂಡನಹಳ್ಳಿ. ಕೊಟಗಲ್ಲು, ಮಾಗಡಿ. ಬಿಲಿನಕಟ್ಟೆ ವನದೇವತೆ, ಯತಿರಾಜಸ್ವಾಮಿ ಬೆಟ್ಟ, ಶ್ರೀ ಲಕ್ಷ್ಮಿ ನಾರಾಯಣಸ್ವಾಮಿ ಬೆಟ್ಟ, ಕಲ್ಯಾ ಬೆಟ್ಟ, ಮಾಗಡಿ ಕೋಟೆ, ಎತ್ತಿನಗುಲಗಂಜಿ ಗುಡ್ಡ (ವೈ.ಜಿ.ಗುಡ್ಡ) ಜಲಾಶಯ.	10
		ಕನಕಪುರ	ಮೇಕೆದಾಟು (ಸಂಗಮ). ರಾಮನಗರ ಅಚಲುಬೆಟ್ಟ, ಮೈತ್ರೇಯ ಪಿರಮಿಡ್ ಕಣಿವೆ. ಚತುರ್ಭುಜ ರಾಮದೇವರ ಬೆಟ್ಟ	4
		ಚನ್ನಪಟ್ಟಣ	ಚನ್ನಪಟ್ಟಣ, ದೊಡ್ಡಮಳ್ಳೂರು	2
			ಒಟ್ಟು	51